pumpsets and when will it be supplied ಎನ್ನುವುದಕ್ಕೆ Some applications are pending since 3 years. Power supply to pending applications will be arranged in about a year's time. ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ಒಂದು ಮಾತನ್ನು ಹೇಳಿದರೆ ಬಹುಶಃ ಮಾನ್ಯ ಸದಸ್ಯರಿಗೆ ಉಪಯುಕ್ತವಾಗಬಹುದು. ನಾವು ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 40ಸಾವಿರ ಟಾರ್ಗೆಟ್ ಏನಿತ್ತು. ಅದನ್ನು 60 ಸಾವಿರಕ್ಕೆ ಏರಿಸಿದ್ದೇವೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 7ಲಕ್ಷ ಚಿಲ್ಲರೆ ಪಂಪುಸೆಟ್ಟುಗಳಿಗೆ ಎನರ್ಜೈಸ್ ಮಾಡ್ದೈವೆ. In addition to that 60ಸಾವಿರ ಮಾಡುತ್ತಿದ್ದೇವೆ. ಇಷ್ಟು ಮಾಡಿದರೂ ಕೂಡ ಇನ್ನೂ ಅಲ್ಪಸ್ವಲ್ಪ ಬಾಕಿ ಉಳಿಯಬಹುದು ಎನ್ನುವುದನ್ನು ವಿಚಾರ ಮಾಡಿದ್ದೇವೆ. ಪ್ರಸಕ್ತ ವರ್ಷಕ್ಕೆ ಟಾರ್ಗೆಟ್ 875 ಇದ್ದು, ಅದನ್ನು 1,200 ಕ್ಕೆ ಏರಿಸಿದ್ದೇವೆ. ಈ ವರ್ಷ ಪೆಚ್ಚಿಗೆ ಕೊಡುತ್ತೇವೆ. ಇಷ್ಟಾದರೂ ಕೂಡ ಇನ್ನೂ ಆರುನೂರು ಚಿಲ್ಲರೆ ಉಳಿಯಬಹುದು ಎಂದು ನಾವು ಅಂದಾಜು ಮಾಡಿದ್ದೇವೆ.

ಡಾ. ಎನ್. ಬಿ. ನಂಜಪ್ಪ :– ಹಾಲಿ ನಮ್ಮ ತಾಲ್ಲೂಕಿನಲ್ಲಿ 2,700 ಚಿಲ್ಲರೆ ಕೊರೆದಿರತಕ್ಕ ಬೋರ್‌ವೆಲ್‌ಗಳು ಇವೆ. ಇವು 1986 ರಿಂದ ಇಲ್ಲಿಯವರೆಗೆ ಪೆಂಡಿಂಗ್ ಇವೆ. ಈಗ ಬರಗಾಲ ಇರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು, ಇದಕ್ಕೆ ಆದ್ಯತೆ ಕೊಟ್ಟು, ಆದಷ್ಟು ಬೇಗ ನಮಗೆ ಎನರ್ಜೈಜ್ ಮಾಡಿಕೊಡುವುದಕ್ಕೆ ಪಂಪ್‌ಸೆಟ್ ಮಾಡಿದರೆ, ಅನೇಕ ತೆಂಗಿನ ತೋಟಗಳು ಮತ್ತು ಬರಗಾಲ ಪೀಡಿತ ಪ್ರದೇಶ ಏನಿದೆ. ಇದಕ್ಕೆ ಸಹಾಯ ಮಾಡಿದಂತಾಗುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ. ಆ ಕಡೆ ತೆಂಗಿನ ಫಸಲು ಇದೆ. ಎಂದು ನಮಗೆ ಗೊತ್ತು. ಬರಗಾಲ ಪರಿಸ್ಥಿತಿ ಇದೆಯೆಂಬ ವಿಚಾರವೂ ನಮಗೆ ಗೊತ್ತು. ಇದು ನಿಜವಾಗಿಯೂ ಚನ್ನರಾಯಪಟ್ಟಣಕ್ಕೆ ಮಾತ್ರ ಸೀಮಿತವಾದ ವಿಚಾರ ಅಲ್ಲ. ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ಈ ಪರಿಸ್ಥಿತಿ ಇದೆ. That is why the Government took a decision of extending this facility of energi- sation from 40,000 to 60,000. ಆದರಲ್ಲಿ ಚನ್ನರಾಯಪಟ್ಟಣಕ್ಕೆ ಸೀಮಿತಗೊಳಿಸುವ ಹಾಗಿದ್ದರೆ, ನಾನು ಈಗಾಗಲೇ ಹೇಳಿದಹಾಗೆ, 875ರಿಂದ 1200 ಕ್ಕೆ ಏರಿಸಲಾಗಿದ್ದು, ಇನ್ನೂ ಉಳಿಯುತ್ತವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಸಿದ್ದೇನೆ. ಇದಕ್ಕೂ ಕಾರ್ಯಕ್ರಮ ಹಾಕುತ್ತೇವೆ. ಆರ್ಜೆಂಟಾಗಿ ಈ ಕೆಲಸ ತೆಗೆದು ಕೊಳ್ಳುವುದಕ್ಕೆ ನಮಗೆ ಕಂಡಕ್ಟರ್ಸ್ ಕೊರತೆ ಇದೆ. ಇದಕ್ಕೆ ಹಣ ಒದಗಿಸಿ ಕೊಡುವ ಕಾರ್ಯಕ್ರಮವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಕೆ. ಇ. ಬಿ. ನವರಿಗೂ ಈ ವಿಚಾರ ತಿಳಿಸಿದ್ದೇವೆ. ಅವರೂ ಕೂಡ ಕಾರ್ಯಕ್ರಮ ಹಾಕಿದ್ದಾರೆ. ಈ ಕೆಲಸ ಮಾಡುತ್ತೇವೆ.

ವಿಷಯ :– ಸಣ್ಣನೀರಾವರಿಯ ಸಹಾಯಕ ಕಾರ್ಯಪಾಲಕ ಕಛೇರಿಯನ್ನು ಸ್ಥಳಾಂತರಿಸಿರುವುದರಿಂದ ರೈತರಿಗೆ ತೊಂದರೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 217 (811)

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) :– ಮಾನ್ಯ ಸಣ್ಣನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕು ಮಟ್ಟದಲ್ಲಿದ್ದ ಸಣ್ಣ ನೀರಾವರಿಯ ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿಯನ್ನು ಜಿಲ್ಲಾ ಕೇಂದ್ರಕ್ಕೆ ವರ್ಗಾಯಿಸಿರುವುದರಿಂದ ರೈತರಿಗಾಗುತ್ತಿರುವ ಅನಾನುಕೂಲತೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರೈತರ ಮನೆಬಾಗಿಲಿನಲ್ಲಿಯೇ ಅತನ ಸಮಸ್ಯೆಯನ್ನು ಪರಿಹರಿಸಿಕೊಡಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆಂದು ಹೇಳುವ ಸರ್ಕಾರದ ನೀತಿಗೆ ಇದು ವಿರುದ್ಧವಾಗಿದೆಯಲ್ಲವೇ ?

ಇ) ಹಿಂದಿನ ಲೋಕೋಪಯೋಗಿ ಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುತ್ತಾ ಈ ಸಮಸ್ಯೆಯನ್ನು ಬಗೆಹರಿಸಿ ಕೊಡುತ್ತೇವೆಂದು ಭರವಸೆ ನೀಡಿದ್ದರು. ಈ ಬಗ್ಗೆ ಕೈಗೊಂಡ ಕ್ರಮವೇನು ?

ಈ) ನಲವತ್ತು ಹೆಕ್ಟೇರು ಮತ್ತು ಅದಕ್ಕೂ ಹೆಚ್ಚು ಆಚ್ಚುಕಟ್ಟು ಹೊಂದಿರುವ ಎಲ್ಲಾ ಕೆರೆಗಳನ್ನು ಜಿಲ್ಲಾ ಪರಿಷತ್ತಿನಿಂದ ವಾಪಸ್ಸು ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ತಾಲ್ಲೂಕು ಮಟ್ಟದಲ್ಲಿ ಕಛೇರಿಗಳಲ್ಲಿ ಸಾಕಷ್ಟು ಕೆಲಸವಿಲ್ಲದೆ ಇದ್ದುದರಿಂದ ಹಾಗೂ ಆ ಕಛೇರಿಗಳಿಗೆ ಇನ್ನು ಮುಂದೆ ಕಾರ್ಯಗತಗೊಳಿಸಬೇಕೆಂದು ನಿರ್ವಹಿಸಲಾಗಿರುವ ಕೆಲಸ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು 5 ಸಬ್‌ಡಿವಿಜನ್‌ಗಳನ್ನು ವಿದ್ಯುತ್ ಇನ್‌ವೆಸ್ಟಿಗೇಷನ್ ಸಬ್ ಡಿವಿಜನ್‌ಗಳಾಗಿ ಪರಿವರ್ತಿತಗೊಳಿಸಿ ಸ್ಥಳಾಂತರಿಸಲಾಗಿದೆ. ಇದು ಸರ್ಕಾರದ ನೀತಿಗೆ ಅನುಗುಣವಾಗಿದೆ.

ಇ) ಈ ಬಗ್ಗೆ ಹಿಂದಿನ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಯಾವ ಭರವಸೆಯನ್ನೂ ನೀಡಿರುವುದಿಲ್ಲ.

ಈ) ಇಲ್ಲ.

ಶ್ರೀ ಎಂ. ಪುಟ್ಟಸ್ವಾಮಿಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ, ನನ್ನ ಉದ್ದೇಶಕ್ಕನುಗುಣವಾಗಿ ಇಲ್ಲ. ನನ್ನ ದೃಷ್ಟಿಯಿಂದ ಕೊಟ್ಟಿರತಕ್ಕ ಮೊದಲನೇ ಪ್ರಶ್ನೆಗೆ, ಸಣ್ಣ ನೀರಾವರಿ ಇಲಾಖೆಯನ್ನು ತಾಲ್ಲೂಕಿನಿಂದ ಜಿಲ್ಲಾ ಕೇಂದ್ರಕ್ಕೆ ವರ್ಗಾವಣೆ ಮಾಡುವುದರಿಂದ, ರೈತರಿಂದ ಯಾವ ದೂರೂ ಬಂದಿಲ್ಲವೆಂದು ಹೇಳುತ್ತಿದ್ದಾರೆ. ರೈತರೇ ನೇರವಾಗಿ ದೂರು ಕೊಡ್ತದ್ದಿದ್ದರೂ ಸಹ, ರೈತರ ಪ್ರತಿನಿಧಿಯಾಗಿ ಈ ಸಮಸ್ಯೆ ಬಗ್ಗೆ ಸಾಕಷ್ಟು ಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ಎರಡನೇ ಪ್ರಶ್ನೆ, ಇದರಿಂದ ರೈತರಿಗೆ ತೊಂದರೆಯಾಗಿದೆ. ತಾಲ್ಲೂಕಿನಲ್ಲಿ ಸಹಾಯಕ ಇಂಜಿನಿಯರನ್ನು ನಿಲ್ಲಿಸುವ ವ್ಯವಸ್ಥೆ ಮಾಡಿ, ಮತ್ತೆ ಕೆಲಸ ಸಾಕಷ್ಟು ಇಲ್ಲದಿದ್ದರೆ, ಹಿಂದೆ ಏನು ನಿಯಮ ಇತ್ತೋ ಅದೇರೀತಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಏನಿದ್ದಾರೆ ಅವರಿಗೇ ಈ ಇಲಾಖೆಯನ್ನೂ ವಹಿಸಿದರೆ, ಎರಡು ಕೆಲಸಗಳನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಇರಬೇಕೆಂದು ಕೇಳಿದ್ದೇನೆ, ಇದನ್ನು ಮಾಡಿಕೊಡಬೇಕು. ಹಿಂದಿನ ಲೋಕೋಪಯೋಗಿ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಹಿಂದೆ ಅವಶ್ಯಕತೆಯ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ, ಈ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಹೇಳಿದ್ದರು. ಜೊತೆಗೆ 40 ಹೆಕ್ಟೇರ್ ನೀರಾವರಿ ಇರತಕ್ಕ ಕೆರೆಗಳು ಏನಿವೆ, ಅವುಗಳನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳುತ್ತೇವೆಂದೂ ಹೇಳಿದ್ದರು. ಅವರು ಮಲೆನಾಡು ಜಿಲ್ಲೆಯಿಂದ ಬರದೇ ಇದ್ದರೂ ಕೂಡ, ಮೈದಾನ ಪ್ರದೇಶದ ಮಂತ್ರಿಗಳಾಗಿ ಸಣ್ಣ ನೀರಾವರಿ ಬಗ್ಗೆ ಅವರಿಗೆ ಕಷ್ಟ ಗೊತ್ತಿತ್ತು. ಆದುದರಿಂದ, ದಯಮಾಡಿ, ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಆದಷ್ಟು ಬೇಗ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ :– ಪರಿಶೀಲಿಸಲಾಗುವುದು.

ವಿಷಯ :– ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯ ಅಂದಾಜು ವೆಚ್ಚ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 218 (868)

ಶ್ರೀ ಬಿ. ಪೆಚ್. ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ (ಮೂಲತಿ ಯೋಜನೆ ಪೊರತುಪಡಿಸಿ) ನೀರಾವರಿ ಯೋಜನೆಯ ನೀಲನಕ್ಷೆ ಹಾಗೂ ಅಂದಾಜು ವೆಚ್ಚ ಸಿದ್ಧವಾಗಿದೆಯೇ ಹಾಗಿದ್ದಲ್ಲಿ ಒಟ್ಟು ಅಂದಾಜು ವೆಚ್ಚ ಎಷ್ಟು ಹಾಗೂ ನೀರಾವರಿ ಕ್ಷೇತ್ರವೆಷ್ಟು ?

ಆ) ಹಾಗಿದ್ದಲ್ಲಿ ಈ ಯೋಜನೆಯಿಂದ ಪ್ರಯೋಜನ ಪಡೆಯಬಹುದಾದ ತಾಲ್ಲೂಕುಗಳು, ಹಾಗೂ ಎಕರೆವಾರು ಕ್ಷೇತ್ರವೆಷ್ಟು ?

ಇ) ಈ ಯೋಜನೆಗೆ ರಾಜ್ಯ ತಾಂತ್ರಿಕ ಸಮಿತಿಯ ಮಂಜೂರಾತಿ ದೊರೆತಿದೆಯೇ ? ದೊರೆತಿದ್ದರೆ ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಲಾಗಿದೆಯೇ ?

ಈ) ಕೇಂದ್ರಕ್ಕೆ ಕಳುಹಿಸದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ? ಇದಕ್ಕೆ ರಾಜ್ಯ ಸರ್ಕಾರದ ಕ್ರಮವೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಆಗಿದೆ.